# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು – 570 006.

ಪರೀಕ್ಷಾ ವಿಭಾಗ


ಸಂಖ್ಯೆ: ಕರಾಮುವಿ/ಪವಿ/ಸಾ.ಶಾ/ಇ.ಆಫೀಸ್/2020-21. ದಿನಾಂಕ: 07-08-2021.

## ಸುತ್ತೋಲೆ

**ವಿಷಯ: ವಿಶ್ವವಿದ್ಯಾನಿಲಯದ 2014–15ನೇ ಸಾಲಿನಿಂದ 2019–20ನೇ ಶೈಕ್ಷಣಿಕ ಸಾಲಿನವರೆಗಿನ ಎಲ್ಲಾ ಸ್ನಾತಕ/ಸ್ನಾತಕೋತ್ತರ ಕಾರ್ಯಕ್ರಮಗಳ ವಿದ್ಯಾರ್ಥಿಗಳ ಫಲಿತಾಂಶ ಮತ್ತು ಅಂಕಪಟ್ಟಿಗಳ ವಿಷಯಗಳಿಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳ ಗಮನಕ್ಕೆ.**

* * * * *

ಪ್ರಿಯ ವಿದ್ಯಾರ್ಥಿಗಳಿಗೆ,

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ವಿಶ್ವವಿದ್ಯಾನಿಲಯದ 2014–15ನೇ ಶೈಕ್ಷಣಿಕ ಸಾಲಿನಿಂದ 2016–17ನೇ ಶೈಕ್ಷಣಿಕ ಸಾಲಿನವರೆಗಿನ ವಿವಿಧ ಶೈಕ್ಷಣಿಕ ಕಾರ್ಯಕ್ರಮಗಳ ಅಂಕಪಟ್ಟಿಗಳನ್ನು ಮುದ್ರಿಸಿ ವಿತರಿಸಲಾಗುತ್ತಿದೆ, ಸದರಿ ಅಂಕಪಟ್ಟಿಗಳಲ್ಲಿ ವಿವಿಧ ಕಾರ್ಯಕ್ರಮಗಳ **17500** ಅಂಕಪಟ್ಟಿಗಳನ್ನು ಈಗಾಗಲೇ ರವಾನಿಸಲಾಗಿದ್ದು, ಉಳಿದ ಅಂದಾಜು **12000** ಅಂಕಪಟ್ಟಿಗಳನ್ನು ಅನುಕ್ರಮವಾಗಿ ರವಾನಿಸಲಾಗುತ್ತಿದೆ, ಹಲವಾರು ಕಾರಣಗಳಿಂದ ಅಂಕಪಟ್ಟಿಗಳು ತಲುಪದೆ ಇದ್ದಲ್ಲಿ ಅಂತಹ ವಿದ್ಯಾರ್ಥಿಗಳು ಅಂಕಪಟ್ಟಿಗಳನ್ನು ವಿಶ್ವವಿದ್ಯಾನಿಲಯದ ಕೇಂದ್ರ ಕಚೇರಿಗೆ ಬಂದು ಸೂಕ್ತ ದಾಖಲಾತಿಗಳನ್ನು ಪ್ರಸ್ತುತ ಪಡಿಸಿ ಪಡೆಯಬೇಕೆಂದು ತಿಳಿಸಲಾಗಿದೆ. ಅಂಕಪಟ್ಟಿಗಳಲ್ಲಿ ನ್ಯೂನ್ಯತೆಗಳು ಕಂಡು ಬಂದಲ್ಲಿ ಮೂಲ ಅಂಕಪಟ್ಟಿಯೊಂದಿಗೆ ಸಂಬಂಧಿಸಿದ ಸೂಕ್ತ ದಾಖಲಾತಿಗಳನ್ನು ಲಗತ್ತಿಸಿ ಅರ್ಜಿಯನ್ನು ಕುಲಸಚಿವರು (ಪರೀಕ್ಷಾಂಗ), ರವರ ಕಚೇರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ರವಾನಿಸಿದಲ್ಲಿ ಶೀಘ್ರವಾಗಿ ಸರಿಪಡಿಸಿ ನೀಡಲಾಗುವುದು.

ಮುಂದುವರೆದು ವಿಶ್ವವಿದ್ಯಾನಿಲಯದ 2019–20ನೇ ಶೈಕ್ಷಣಿಕ ಸಾಲಿನ (ಜನವರಿ ಆವೃತ್ತಿ ಮತ್ತು ಜುಲೈ ಆವೃತ್ತಿಯ ತೆರೆದ ಪುಸ್ತಕ ಪರೀಕ್ಷೆಗಳ) ವಿವಿಧ ಶೈಕ್ಷಣಿಕ ಕಾರ್ಯಕ್ರಮಗಳ ಪರೀಕ್ಷಾ ಫಲಿತಾಂಶಗಳನ್ನು ವಿಶ್ವವಿದ್ಯಾನಿಲಯದ ಅಧಿಕೃತ ಜಾಲತಾಣದಲ್ಲಿ ಪ್ರಕಟಿಸಲಾಗಿದ್ದು ಸದರಿ ಫಲಿತಾಂಶಗಳಲ್ಲಿ ಹೆಸರು, ನೋಂದಣಿ ಸಂಖ್ಯೆ, ವಿಷಯ, ಇನ್ನಿತರೆ ವ್ಯತ್ಯಾಸಗಳು ಕಂಡುಬಂದಲ್ಲಿ ಅಂತಹ ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯದ ಅಧಿಕೃತ ಜಾಲತಾಣದಲ್ಲಿ ಪ್ರಕಟಿಸಲಾಗಿರುವ ಅಂಕಪಟ್ಟಿಗಳ ಪ್ರತಿಯನ್ನು ಡೌನ್‌ಲೋಡ್ ಮಾಡಿಕೊಂಡು ಸದರಿ ಅಂಕಪಟ್ಟಿಯೊಂದಿಗೆ ನಿಮಗೆ ನೀಡಲಾಗಿರುವ ಗುರುತಿನ ಚೀಟಿ (Identity Card), ಪರೀಕ್ಷಾ ಶುಲ್ಕ ರಶೀತಿ (Exam Fees Paid Reciept), ಪ್ರವೇಶಾತಿ ಪತ್ರ (Hall Ticket), ಆಂತರಿಕ ನಿಬಂಧನೆಗಳನ್ನು (Internal assignment) ಅಧ್ಯಯನ ಕೇಂದ್ರ / ಪ್ರಾದೇಶಿಕ ಕೇಂದ್ರ / ಅಧ್ಯಯನ ವಿಭಾಗಗಳಲ್ಲಿ ಸ್ವೀಕರಿಸಿರುವ ಬಗ್ಗೆ ದೃಢೀಕೃತ ಪ್ರತಿಯನ್ನು ಕುಲಸಚಿವರು (ಪರೀಕ್ಷಾಂಗ), ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮುಕ್ತ ಗಂಗೋತ್ರಿ, ಮೈಸೂರು. ರವರ ಕಚೇರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ರವಾನಿಸಿದಲ್ಲಿ ಶೀಘ್ರವಾಗಿ ಸರಿಪಡಿಸಿ ನೀಡಲಾಗುವುದು.

**ವಿಶೇಷ ಸೂಚನೆ: ಆಂತರಿಕ ನಿಬಂಧನೆ ಅಂಕಗಳ ವ್ಯತ್ಯಾಸಗಳು, ಕುಲಸಚಿವರು (ಪರೀಕ್ಷಾಂಗ) ರವರ ಗಮನಕ್ಕೆ ಬಂದಿದ್ದು, ಸದರಿ ವಿಷಯವನ್ನು ಶೀಘ್ರವಾಗಿ ಸರಿಪಡಿಸಲು ಈಗಾಗಲೇ ಸಂಬಂಧಿಸಿದ ಅಧ್ಯಯನ ವಿಭಾಗಗಳು ಮತ್ತು ಪ್ರಾದೇಶಿಕ ಕೇಂದ್ರಗಳಿಗೆ ಸೂಚಿಸಲಾಗಿದ್ದು, ಪರಿಷ್ಕೃತ ಫಲಿತಾಂಶದ ಪಟ್ಟಿಯನ್ನು ಶೀಘ್ರದಲ್ಲಿ ಪ್ರಕಟಿಸಲಾಗುವುದು.**

**ಹೆಚ್ಚಿನ ಮಾಹಿತಿಗಾಗಿ ಪರೀಕ್ಷಾ ವಿಭಾಗದ ಸಹಾಯವಾಣಿ ಸಂಖ್ಯೆ: 8929307673 ಗೆ ಕರೆ ಮಾಡಿ ಸಂಪರ್ಕಿಸಲು ತಿಳಿಸಿದೆ.**

ಕುಲಸಚಿವರು (ಪರೀಕ್ಷಾಂಗ)

ಕುಲಸಚಿವ (ಪರೀಕ್ಷಾಂಗ)
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತಗಂಗೋತ್ರಿ, ಮೈಸೂರು-570 006